## ಸೆಲೆಬ್ರಿಟಿ

■ ಹನಿ



# ಸೂಪರ್‌ಸ್ಟಾರ್ ಡೈರೆಕ್ಟರ್

70ರ ದಶಕದ ಕೊನೆಯಲ್ಲಿ ಹಿಂದಿ– ತುಳು ಸಿನಿಮಾ ನೋಡಿದವರಿಗೆ ಫೈಟರ್ ಶೆಟ್ಟಿ ಗೊತ್ತು. ಆ ಕಾಲದ ಸುಪ್ರಸಿದ್ಧ ಫೈಟ್‌ಮಾಸ್ಟರ್ ಮತ್ತು ವಿಲ್ಲನ್ ಆಗಿದ್ದ ಫೈಟರ್ ಶೆಟ್ಟಿಯವರ ಮಗ ಈ ರೋಹಿತ್ ಶೆಟ್ಟಿ. 11ರ ಹರೆಯದಲ್ಲಿ ಅಪ್ಪನನ್ನು ಕಳೆದುಕೊಂಡು ಸಿರಿತನ–ಬಡತನ ಎರಡನ್ನೂ ಹತ್ತಿರದಿಂದ ನೋಡಿದ ಬಾಲಕ, ಈಗ ಬಾಲಿವುಡ್‌ನಲ್ಲಿ ಏರಿರುವ ಎತ್ತರ ಅಸಾಮಾನ್ಯವಾದದ್ದು. ಹೀಗೆಂದು ಯಾರಾದರೂ ಬರೆದರೂ ಪ್ರಯೋಜನವಿಲ್ಲ; ಯಾಕೆಂದರೆ ರೋಹಿತ್ ಯಾವ ಪೇಪರನ್ನೂ ಓದಲ್ಲ! ಸಿನಿಮಾ ಪಾರ್ಟಿಗಳಿಗೆ, ಪ್ರೀಮಿಯರ್ ಶೋಗಳಿಗೂ ಹೋಗದ ಈತ ಬಾಲಿವುಡ್‌ನಲ್ಲಿ ಅತ್ಯಧಿಕ ಸಂಭಾವನೆ (12.4 ಕೋಟಿ ರೂಪಾಯಿ!) ಪಡೆಯುತ್ತಿರುವ ಡೈರೆಕ್ಟರ್! ಈತ ನಿರ್ದೇಶಿಸಿದ ಗೋಲ್‌ಮಾಲ್ ಸರಣಿ ಚಿತ್ರಗಳು, ಸಿಂಗಂ, ಬೋಲ್‌ಬಚ್ಚನ್, ಚೆನ್ನೈ ಎಕ್ಸ್‌ಪ್ರೆಸ್– ಎಲ್ಲವೂ ಬಾಕ್ಸಾಫೀಸಿನಲ್ಲಿ ಇನ್ನಿಲ್ಲದಂತೆ ಹಣ ದೋಚಿದವು. ಸತತ ಏಳು ಸೂಪರ್‌ಹಿಟ್ ಚಿತ್ರಗಳನ್ನು ಕೊಟ್ಟ ಈತನನ್ನು ಈಗ ಬಾಲಿವುಡ್‌ನಲ್ಲಿ 70–80ರ ದಶಕದ ಯಶಸ್ವಿ ನಿರ್ದೇಶಕ ಮನಮೋಹನ್ ದೇಸಾಯಿಗೆ ಹೋಲಿಸಲಾಗುತ್ತಿದೆ. ಈತ ನಿರ್ದೇಶಿಸಿದ ಸತತ ಮೂರು ಚಿತ್ರಗಳು 100 ಕೋಟಿ ರೂಪಾಯಿ ಕಲೆಕ್ಷನ್ ದಾಟಿದ ಬಳಿಕ ಈತನನ್ನು 'ನೂರು ಕೋಟಿ ಕ್ಲಬ್ ಅಧ್ಯಕ್ಷ'ನೆಂದೇ ಕರೆಯಲಾಗುತ್ತಿದೆ!

ರೋಹಿತ್ ಶೆಟ್ಟಿ ಬಾಲಿವುಡ್ ಪ್ರವೇಶಿಸಿದ್ದು 17ರ ಹರೆಯದಲ್ಲಿ. ಅಜಯ್ ದೇವಗನ್ ಹೀರೋ ಆಗಿ ಮೊತ್ತಮೊದಲು ನಟಿಸಿದ 'ಫೂಲ್ ಔರ್ ಕಾಂಟೆ' ಚಿತ್ರದಲ್ಲಿ ರೋಹಿತ್ ಸಹಾಯಕ ನಿರ್ದೇಶಕ. ಈಗ ಆತನಿಗೆ 40 ವರ್ಷ. ಈ 23 ವರ್ಷಗಳಲ್ಲಿ ಸಿನಿಮಾ ಮತ್ತು ಟೀವಿ ರಿಯಾಲಿಟಿ ಶೋ ಎರಡರಲ್ಲೂ ಅತ್ಯಧಿಕ ಬೇಡಿಕೆ ಕುದುರಿಸಿಕೊಂಡಿರುವುದು ರೋಹಿತ್ ಹೆಗ್ಗಳಿಕೆ. ಸ್ಪೋರ್ಟ್ಸ್ ಕಾರ್ ಓಡಿಸುವ ಮತ್ತು ತೋಳಲ್ಲಿ ಹಚ್ಚೆ ಹಾಕಿಸಿಕೊಳ್ಳುವ ಹುಚ್ಚಿರುವ ರೋಹಿತ್, ಮಾಧ್ಯಮಗಳಲ್ಲಿ ಬರುವ ಯಾವ ಹೊಗಳಿಕೆ– ತೆಗಳಿಕೆಗೂ ಪ್ರತಿಕ್ರಿಯೆ ನೀಡುವುದಿಲ್ಲ. 'ಅದು ಟೈಮ್‌ವೇಸ್ಟ್. ಅದರ ಬದಲು ನನ್ನ ಸ್ಟುಡಿಯೋದಲ್ಲಿ ಕುಳಿತು ಹೊಸ ಚಿತ್ರದ ಚಿತ್ರಕಥೆ ಬರೆಯುತ್ತೇನೆ' ಎನ್ನುವುದು ಸಮಜಾಯಿಷಿ. 'ಸಿಂಗಂ ರಿಟರ್ನ್ಸ್' ಚಿತ್ರದಲ್ಲಿ ತಲ್ಲೀನನಾಗಿರುವ ಶೆಟ್ಟಿ, 'ಆ ಚಿತ್ರದ ಚಿತ್ರಕಥೆಯನ್ನು 150ನೇ ಸಲ ತಿದ್ದಿದ್ದೇನೆ' ಎಂದು ಹೇಳಿರುವುದು ಕೆಲಸದ ಕುರಿತ ಶ್ರದ್ಧೆಗೆ ಸಾಕ್ಷಿ.



# ಪಮೇಲಾ ಡೈವೋರ್ಸ್!

'ಚಂಚಲತೆ ನಿನ್ನ ಇನ್ನೊಂದು ಹೆಸರೇ ಹೆಣ್ಣು' ಎಂದು ಷೇಕ್ಸ್‌ಪಿಯರ್ ಬರೆದಾಗ ಈ ಪಮೇಲಾ ಆ್ಯಂಡರ್‌ಸನ್ ಹುಟ್ಟಿರಲಿಲ್ಲ. ಆದರೆ ಆ ಹೇಳಿಕೆ ಈ 'ಬೇ ವಾಚ್ ಸುಂದರಿ'ಯ ಕುರಿತೇ ಬರೆದಂತಿದೆ! ತನ್ನ ಗಂಡನಿಗೆ ಎರಡನೇ ಸಲ ಡೈವೋರ್ಸ್ ನೋಟಿಸ್ ಕೊಟ್ಟು ಪಮೇಲಾ ಇದೀಗ ಸುದ್ದಿಯಲ್ಲಿದ್ದಾಳೆ.

ಪಮೇಲಾ ಮೊದಲು ಮದುವೆಯಾದದ್ದು 1995ರಲ್ಲಿ ಟಾಮ್ ಲೀಯನ್ನು. ಮೂರು ವರ್ಷದ ಬಳಿಕ ಗಂಡನಿಗೆ ಸೋಡಾಚೀಟಿ ಕೊಟ್ಟ ಆಕೆ, 8 ವರ್ಷದ ಒಬ್ಬಂಟಿತನದ ಬಳಿಕ ಕಿಡ್ ರಾಕ್‌ನನ್ನು ಮದುವೆಯಾದಳು. ಆದರೆ ಆ ಮದುವೆ ಒಂದು ತಿಂಗಳಲ್ಲೇ ಮುರಿದುಬಿತ್ತು. ರಿಕ್ ಸಾಲೊಮನ್ ಎಂಬ ಪೋಕರ್ ಚಾಂಪಿಯನ್‌ಅನ್ನು ಪಮೇಲಾ ಮೊದಲ ಸಲ ಮದುವೆಯಾದದ್ದು 2007ರಲ್ಲಿ. ಆದರೆ ಎರಡೇ ತಿಂಗಳಲ್ಲಿ ಗಂಡನಿಗೆ ಸೋಡಾಚೀಟಿ ಕೊಟ್ಟಳು.

ಈ ವರ್ಷ ಜನವರಿಯಲ್ಲಿ ಪಮೇಲಾ ಮತ್ತೆ ರಿಕ್ ಸಾಲೊಮನ್‌ನನ್ನು ಮದುವೆಯಾಗಿದ್ದಳು. ಎಲ್ಲ ಚೆನ್ನಾಗಿಯೇ ಇತ್ತು. ಆದರೆ ಇದೀಗ ಮತ್ತೆ ಗಂಡನಿಗೆ ಡೈವೋರ್ಸ್ ನೋಟಿಸ್ ನೀಡಿದ್ದಾಳೆ. ಕೆಲವರ ಪ್ರಕಾರ, ಈಕೆ ದುಡ್ಡಿಗಾಗಿ ಹೀಗೆ ಮಾಡುತ್ತಿದ್ದಾಳಂತೆ. 'ರಿಕ್ ಸಾಲೊಮನ್ ಬಿಗ್ ಒನ್ ಪೋಕರ್ ವಿಶ್ವ ಟೂರ್ನಿಯಲ್ಲಿ ಚಾಂಪಿಯನ್ ಆಗಿ 28 ಲಕ್ಷ ಡಾಲರ್ ಬಹುಮಾನ ಗೆದ್ದ ಎರಡೇ ದಿನಗಳಲ್ಲಿ ಪಮೇಲಾ ಡೈವೋರ್ಸ್‌ಗೆ ಅರ್ಜಿ ಹಾಕಿದ್ದಾಳೆ. ಆತನ ಆಸ್ತಿಯಲ್ಲಿ ಅರ್ಧ ಪಾಲು ಸಿಗುವುದು ಗ್ಯಾರಂಟಿ' ಎನ್ನುವುದು ಟೀಕಾಕಾರರ ಕುಹಕ. ಆದರೆ ಫೇಸ್‌ಬುಕ್ ಪುಟದಲ್ಲಿ ಪಮೇಲಾ ಬರೆದಿರುವ ಕವಿತೆಯೊಂದು ಬೇರೆಯದೇ ಕಥೆ ಹೇಳುತ್ತದೆ: 'ಯಾವ ಪುರುಷನಿಗೂ ನನ್ನನ್ನೇನು ಮಾಡಬೇಕೆಂದು ತಿಳಿದಿಲ್ಲ/ ಅದಕ್ಕಾಗಿ ನಾನು ನನ್ನನ್ನೇ ದೂರುತ್ತೇನೆ/ ನಾನು ಯಾವತ್ತೂ ಸುಂದರಿ ಅನ್ನಿಸಿಕೊಳ್ಳಲಿಲ್ಲ/ ಸೆಕ್ಸೀ ಅನ್ನಿಸಿಕೊಂಡೆ, ಕುರುಡಾದೆ...' ಎಂದೆಲ್ಲ ಬರೆದುಕೊಂಡಿದ್ದಾಳೆ ಪಮೇಲಾ. ಸಂತೋಷಕ್ಕೆ ಒಂದೇ ಕಾರಣವಿರುತ್ತದೆ; ದುಃಖಕ್ಕೆ ನೂರೆಂಟು ಕಾರಣಗಳು! ●

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65